ಸಾಕ್ಷಿಯನ್ನು ದಿಃ 17-08-2019 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಗಳ ಪರ – ಶ್ರೀ ಜಿ ಜಿ ಜಿ ವಕೀಲರಿಂದಃ

ನಾನು ಮದ್ದೇರಹಳ್ಳದ ವಾಸಿ. ಪ್ರತಿವಾದಿಗಳು ಬಿ ಎಲ್ ಗೌಡ ಬಡಾವಣೆಯಲ್ಲಿ ವಾಸವಾಗಿದ್ದಾರೆ. ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ ಹಾಗೂ ಕುಲ ಬಾಂಧವರೂ ಅಲ್ಲ. ನಾನು 5 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ವ್ಯವಸಾಯದ ಜೊತೆ ಹಣ ಲೇವಾದೇವಿ ವ್ಯವಹಾರ ಮಾಡುತ್ತಿಲ್ಲ. ನನಗೆ ಬ್ರೋಕರ್ ಮೂಲಕ ಪ್ರತಿವಾದಿಗಳ ಪರಿಚಯವಾಗಿದೆ. 2013 ರಲ್ಲಿ ನನಗೆ ಬಸಣ್ಣ ಎನ್ನುವ ಬ್ರೋಕರ್ ಮೂಲಕ ಪ್ರತಿವಾದಿಗಳ ಪರಿಚಯವಾಗಿದೆ. ಬಸಣ್ಣ ಹಿರಿಯೂರಿನಲ್ಲಿದ್ದ.

ಈ ದಾವೆಯಲ್ಲಿ ಹೇಳಿದ ವ್ಯವಹಾರದ 3 ತಿಂಗಳ ಪೂರ್ವದಲ್ಲಿ ನನಗೆ ಬಸಣ್ಣನ ಪರಿಚಯವಾಗಿದೆ. ಆತ ಅಂಗಡಿ ಇಟ್ಟಿದ್ದ. ಅಲ್ಲಿಗೆ ಹೋಗಿ ಬಂದು ನನಗೆ ಆತನ ಪರಿಚಯವಾಗಿದೆ. ಬಸಣ್ಣ ಹಿರಿಯೂರು ಟೌನ್ ನ ಫುಟ್ ಪಾತ್ ನಲ್ಲಿ ಮೆಣಸಿನಕಾಯಿ ವ್ಯಾಪಾರ ಮಾಡುತ್ತಿದ್ದ. ಸದರಿ ಬಸಣ್ಣ ಈಗ ಬದುಕಿದ್ದಾನೆ. ಆತ ಈಗ ಬೆಂಗಳೂರಿನಲ್ಲಿ ಇದ್ದಾನೆ. ಸನ್ 2014 ರಲ್ಲಿ ಕರಾರು ಆದ ನಂತರ ನನಗೆ ಬಸಣ್ಣನ ಸಂಪರ್ಕವಿಲ್ಲ.

ನಾನು ಈ ನ್ಯಾಯಾಲಯದಲ್ಲಿ ಮೂರು ಚೆಕ್ ಕೇಸ್ ಗಳನ್ನು ದಾಖಲಿಸಿದ್ದೇನೆ. ಕ್ರಯದ ಕರಾರು ಪತ್ರದ ಮೇಲೆ ಮೂರು ದಾವೆಗಳನ್ನು ಹೂಡಿದ್ದೇನೆ ಎಲ್ಲಾ ಪ್ರಕರಣಗಳು ಚಾಲ್ತಿಯಲ್ಲಿವೆ. ಒಂದು ಚೆಕ್ ಪ್ರಕರಣ ಮುಕ್ತಾಯಗೊಂಡಿದೆ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ನನ್ನ ಯಾವುದೇ ಚೆಕ್ ಕೇಸ್ ಗಳು ಹಾಗೂ ಕ್ರಯದ ಕರಾರು ಪತ್ರದ ಮೇಲೆ ದಾಖಲಿಸಿದ ಯಾವುದೇ ದಾಖಲೆಗಳಿಲ್ಲ. ಆ ನ್ಯಾಯಾಲಯದಲ್ಲಿ ಕ್ರಯದ ಕರಾರು ಪತ್ರದ ಮೇಲೆ ಒಂದು ದಾವೆ ಇದ್ದು ಅದರಲ್ಲಿ ತೀರ್ಪು ಆಗಿದೆ. ಆ ದಾವೆಯನ್ನು ಲೋಕಣ್ಣ ಹಾಗೂ ಸಂಕ್ರಮ್ಮ ಎನ್ನುವವರ ವಿರುದ್ಧ ಹೂಡಲಾಗಿತ್ತು. ಹಿರಿಯೂರಿನ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಯಾವುದೇ ಚೆಕ್ ಕೇಸ್ ಗಳು ಇಲ್ಲ. ಅಲ್ಲಿ ಕ್ರಯದ ಕರಾರು ಪತ್ರದ ಮೇಲೆ ಒಂದು ದಾವೆ ಇತ್ತು ಅದರಲ್ಲಿ ನನ್ನ ಪರವಾಗಿ ತೀರ್ಮಾನ ಆಗಿದೆ. ನಾನು ಈ ಮೇಲೆ ಹೇಳಿದ ಲೋಕಣ್ಣ ಹಾಗೂ

ಸಂಕ್ರಮ್ಮ ನವರ ವಿರುದ್ದ ಇದ್ದ ದಾವೆ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ತೀರ್ಮಾನವಾಗಿದೆ ಅದನ್ನು ಹೊರತು ಪಡಿಸಿ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ನನಗೆ ಸಂಬಂಧಿಸಿದ ಯಾವುದೇ ದಾವೆಗಳು, ಪ್ರಕರಣಗಳು ಇಲ್ಲ.

ನಾನು ಪ್ರತಿವಾದಿಗಳಿಗೆ ಒಂದೇ ಒಂದು ಸಲ ಹಣ ಕೊಟ್ಟಿದ್ದೆ. ನ್ಯಾಯಾಲಯಕ್ಕೆ ಹಾಜರು ಪಡಿಸಿದ ಕರಾರು ಪತ್ರವಾಗುವ ಮೊದಲು ಆದ ಕರಾರು ಪತ್ರದ ಸಮಯದಲ್ಲಿ ನಾನು ಅವರಿಗೆ ಹಣ ಕೊಟ್ಟಿದ್ದೆ 2013 ರಲ್ಲಿ ನಾನು ಪ್ರತಿವಾದಿಗಳಿಗೆ ರೂ. 5 ಲಕ್ಷ ಹಣ ಕೊಟ್ಟಿದ್ದೆ. ನಾನು ಆ ಹಣ ಕೊಟ್ಟಾಗ ಇದೇ ದಾವಾಸ್ತಿಯ ಬಗ್ಗೆ ಕರಾರು ಪತ್ರ ಬರೆಸಿಕೊಂಡಿದ್ದೆ ನನಗೆ ಆರೋಗ್ಯ ಸರಿ ಇಲ್ಲದ ಕಾರಣ ಆ ಕರಾರು ಪತ್ರದ ಬಾಬ್ತು ಕೊಟ್ಟ ಹಣವನ್ನು ನಾನು ಅವರಿಂದ ಹಿಂದಕ್ಕೆ ಪಡೆದಿದ್ದೇನೆ. ಆ ಕರಾರು ಪತ್ರವನ್ನು ರದ್ದು ಗೊಳಿಸಿಲ್ಲ ಕಾರಣ ಅದರ ಕಾಲಮಿತಿ ಮುಗಿದುಹೋಗಿತ್ತು. ಆ ಮೂಲ ಕರಾರು ಪತ್ರ ನನ್ನ ಬಳಿ ಇದೆ ಪ್ರತಿವಾದಿಗಳಿಂದ ಹಣ ಹಿಂದಕ್ಕೆ ಪಡೆದ ನಂತರ ಕರಾರು ಪತ್ರವನ್ನು ರದ್ದುಪಡಿಸಿಕೊಳ್ಳುವುದು ನಿಮ್ಮ ಕರ್ತವ್ಯ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಕಾಲ ಮಿತಿ ಮೀರಿಹೋಗಿದ್ದರಿಂದ ಅದನ್ನು ರದ್ದು ಪಡಿಸಿಲ್ಲ ಎಂದು ಉತ್ತರಿಸುತ್ತಾರೆ. ಹಾಗಾದರೆ ಅದರ ಮೂಲ ಕರಾರುಪತ್ರವನ್ನು ಅವರಿಗೆ ಹಿಂತಿರಿಗಿಸಬೇಕಾಗಿರುವುದು ನಿಮ್ಮ ಕರ್ತವ್ಯ ಎಂದರೆ ಸಾಕ್ಷಿ ಮೂಲ ಕಾರಾರು ಪತ್ರ ತನ್ನ ಬಳಿ ಇದೆಯೋ ಅಥವಾ ಅವರಿಗೆ ಅದನ್ನು ಹಿಂತಿರುಗಿಸಿದ್ದೇನೋ ಎಂದು ನೋಡಬೇಕು ಎಂದು ಉತ್ತರಿಸುತ್ತಾರೆ.

ನನಗೆ ಈಗ 2-3 ವರ್ಷಗಳಿಂದ ಜ್ಞಾಪಕಶಕ್ತಿ ಸಲ್ಪ ಕಡಿಮೆಯಾಗಿದೆ. ಆದ್ದರಿಂದ ನನಗೆ ಸ್ವಲ್ಪ ಮರುವು ಇದೆ ಎಂದರೆ ಸರಿ. ದಾವಾ ಆಸ್ತಿಯನ್ನು ನಾನು ನೋಡಿದ್ದೇನೆ. 2014 ರಲ್ಲಿ ಕರಾರು ಪತ್ರ ಮಾಡಿದ ದಿನವೇ ಬೆಳಗ್ಗೆ ನಾನು ದಾವಾಸ್ತಿಯನ್ನು ನೋಡಿದ್ದೇನೆ. ಅದಕ್ಕಿಂತ ಪೂರ್ವದಲ್ಲಿ ನಾನು ದಾವಾಸ್ತಿಯನ್ನು ನೋಡಿಲ್ಲ. ದಾವಾಸ್ತಿ ನಗರದ ಹೃದಯ ಭಾಗದಲ್ಲಿದ್ದು ಅದು ಬಿಸನಸ್ ಏರಿಯ ಎಂದರೆ ಸರಿಯಲ್ಲ. ದಾವಾಸ್ತಿ ನೆಲಮಹಡಿ ಹಾಗೂ ಮೊದಲನೇ ಮಹಡಿಯನ್ನು ಒಳಗೊಂಡಿದೆ ಎಂದರೆ ಸರಿ. ಕರಾರು ಪತ್ರ ಮಾಡಿಕೊಂಡ ದಿನ ದಾವಾಸ್ತಿಯ ಬೆಲೆ ಎಷ್ಟು ಎಂದು ಉಪನೋಂದಾಣಾಧಿಕಾರಿಗಳ

ಕಛೇರಿಯಿಂದ ಅದರ ಮೌಲ್ಯವನ್ನು ತಿಳಿದುಕೊಂಡಿಲ್ಲ. ದಾವೆ ಹೂಡುವ ಸಮಯದಲ್ಲೂ ಸಹ ದಾವಾಸ್ತಿಯ ಬೆಲೆ ಎಷ್ಟು ಎಂದು ತಿಳಿಯಲು ಅದರ ಮೌಲ್ಯದ ಬಗ್ಗೆ ದೃಢೀಕರಣ ಪತ್ರವನ್ನು ಪಡೆದುಕೊಂಡಿಲ್ಲ.

ಈಗಲು ದಾವಾಸ್ತಿಯ ಮೌಲ್ಯ ಎಷ್ಟು ಇದೆ ಎಂದು ನನಗೆ ಗೊತ್ತಿಲ್ಲ. 2014 ರಲ್ಲಿ ದಾವಾಸ್ತಿಯ ಬೆಲೆ ರೂ. 50 ಲಕ್ಷಕ್ಕಿಂತ ಹೆಚ್ಚು ಇದೆ ಎಂದರೆ ಸರಿಯಲ್ಲ. ದಾವಾಸ್ತಿ ಈಗ ಒಂದು ಕೋಟಿ ರೂಪಾಯಿ ಬೆಲೆ ಬಾಳುತ್ತದೆ ಎಂದರೆ ಸರಿಯಲ್ಲ. ಕರಾರು ಪತ್ರ ಮಾಡಿಕೊಳ್ಳುವ ಸಮಯದಲ್ಲಿ ದಾವಾಸ್ತಿಯ ಬೆಲೆ ರೂ. 50 ಲಕ್ಷಕ್ಕಿಂತ ಹೆಚ್ಚು ಇತ್ತು ಎಂದು ಈಗ ಅದರ ಬೆಲೆ ರೂ. ಒಂದು ಕೊಟೀ ಇದೆ ಎಂದು ನನಗೆ ಗೊತ್ತಿದ್ದರೂ ಸಹ ಅಷ್ಟು ಬೆಲೆ ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಈ ದಾವೆಯಲ್ಲಿ ಹೇಳಿದ ಕರಾರು ಪತ್ರಕ್ಕೆ ಸಂಬಂಧಿಸಿದಂತೆ ಪ್ರತಿವಾದಿಗಳನ್ನು ತಾಲೂಕು ಕಛೇರಿಯಲ್ಲಿ ಕರಾರು ಪತ್ರ ಮಾಡುವ ದಿನ ಮದ್ಯಾಹ್ನ 12.30 ರ ಸಮಯದಲ್ಲಿ ನೋಡಿದ್ದೇನೆ . ಆ ದಿನ ನಾನು ಇಬ್ಬರು ಪ್ರತಿವಾದಿಗಳನ್ನು ನೋಡಿದ್ದೇನೆ. ಆ ದಿನ ತಾಲೂಕು ಕಛೇರಿಗೆ ಮೊದಲು ನಾನು ಹೋಗಿದ್ದೆ. ನಂತರ ಪ್ರತಿವಾದಿಗಳು ಅಲ್ಲಿಗೆ ಬಂದರು. ನಾವು ಉಭಯ ಪಕ್ಷಗಾರರು ಒಂದೇ ಸಮಯಕ್ಕೆ ಅಲ್ಲಿಗೆ ಹೋಗಿದ್ದೇವೆ. ಆ ದಿನ ತಾಲೂಕು ಕಛೇರಿಗೆ ನನ್ನ ಜೊತೆ ಬೇರೆ ಯಾರು ಬಂದಿರಲಿಲ್ಲ. ಪ್ರತಿವಾದಿಗಳ ಜೊತೆಗೆ ಬಸಣ್ಣ ಬಂದಿದ್ದರು.

ದಾವಾಸ್ತಿಯನ್ನು ಮಾರಾಟ ಮಾಡುತ್ತಿದ್ದಾರೆ ಎಂದು ನನಗೆ ಬಸಣ್ಣ ಹೇಳಿದ. ಆ ವಿಚಾರವನ್ನು ಆತ ನನಗೆ ಬೆಳಗ್ಗೆ 7.30 ಕ್ಕೆ ಹೇಳಿದ್ದಾನೆ. ಹಾಗೆಯೇ ಬಸಣ್ಣ ನನ್ನನ್ನು ಕರೆದುಕೊಂಡು ಹೋಗಿ ಮನೆ ತೋರಿಸಿದ್ದಾನೆ. ಅದರಂತೆ ನಾನು ತಾಲೂಕು ಕಛೇರಿಯ ಬಳಿ ಪ್ರತಿವಾದಿಗಳನ್ನು ನೋಡಿದ್ದೇನೆ. ಪ್ರತಿವಾದಿಗಳು ನನಗೆ ಮನೆಯನ್ನು ತೋರಿಸಿಲ್ಲ ಎಂದರೆ ಸರಿ . ದಾವಾಸ್ತಿಯನ್ನು ಮಾರಾಟ ಮಾಡಲು ಬಯಸಿದ್ದೇವೆ ಎಂದು ಪ್ರತಿವಾದಿಗಳು ನನಗೆ ಹೇಳಿಲ್ಲ ಎಂದರೆ ಸರಿ. ದಾವಾಸ್ತಿ ಮಾರಾಟಕ್ಕಿದೆ ಎಂದು ಬಸಣ್ಣ ನನಗೆ ಹೇಳಿದ್ದ ಎಂದರೆ ಸರಿ.

ಪಿ ಡಬ್ಲ್ಯೂ- 1

ನಮ್ಮಲ್ಲಿ ಕರಾರು ಆಗುವ ಪೂರ್ವದಲ್ಲಿ ಪ್ರತಿವಾದಿಗಳು 2-3 ಸಾರಿ ನನ್ನಿಂದ ಬಡ್ಡಿಗೆ ಹಣ ಪಡೆದಿದ್ದರು ಎಂದರೆ ಸರಿಯಲ್ಲ. ಅದಕ್ಕೆ ಭದ್ರತೆಯಾಗಿ ನನಗೆ ಕರಾರು ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಯಾರಿಗಾದರೂ ಹಣ ಕೊಟ್ಟರೆ ಅವರಿಂದ ಭದ್ರತೆಗಾಗಿ ಚೆಕ್ ಪಡೆಯುತ್ತೇನೆ ಅಥವಾ ಕರಾರು ಪತ್ರ ಬರೆಸಿಕೊಳ್ಳುತ್ತೇನೆ ಎಂದರೆ ಸರಿಯಲ್ಲ

(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿಗಳ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ ಹಿರಿಯೂರು.